ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
Central College Campus, Dr. B.R. AmbedkarVeedhi, Bengaluru – 560 001.
Ph. No.: 080 – 22131385, E-Mail:registrarbcu@gmail.com / bcuccb@gmail.com

ಸಂಖ್ಯೆ: ಬಿಸಿಯು/ಎಸ್‌ವೈಎನ್/ವಿಶೇಷ ಸಭೆ/168 /2019–20 ದಿನಾಂಕ: 03.07.2019.

ಗೆ,

ಸಿಂಡಿಕೇಟ್ ಸದಸ್ಯರು,
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯರೇ

**ವಿಷಯ: ದಿನಾಂಕ: 27.06.2019 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳು.**

***

ದಿನಾಂಕ: 27.06.2019 ರಂದು ಪೂರ್ವಾಹ್ನ 11–00 ಗಂಟೆಗೆ ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
3/7/19
ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು–1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ / ರಕ್ಷಣಾ ಕಡತ.

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ BENGALURU CENTRAL UNIVERSITY
Central College Campus, Dr. B.R. AmbedkarVeedhi, Bengaluru – 560 001.
Ph. No.: 080 – 22131385, E-Mail:registrarbcu@gmail.com / bcuccb@gmail.com

**ಸಂಖ್ಯೆ: ಬಿಸಿಯು/ಎಸ್‌ವೈಎನ್/ವಿಶೇಷ ಸಭೆ//168 /2019–20** **ದಿನಾಂಕ: 03.07.2019.**

ದಿನಾಂಕ 27.06.2019 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆರಸ್ತೆ, ಬೆಂಗಳೂರು – 560 001 ಇಲ್ಲಿ ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ: ಎಸ್. ಜ಼ಾಫೆಟ್,<br>ಕುಲಪತಿಗಳು | ಸಭಾಧ್ಯಕ್ಷರು |
| 2. | ಡಾ: ಎನ್. ನರಸಿಂಹಮೂರ್ತಿ | ಸದಸ್ಯರು |
| 3. | ಡಾ: ಅರವಿಂದ್ ಹೆಚ್.ಟಿ. | ಸದಸ್ಯರು |
| 4. | ಶ್ರೀ. ಹೆಚ್.ಆರ್. ಸತೀಶ್, | ಸದಸ್ಯರು |
| 5. | ಡಾ: ಶಾಂತಿ ರಾಜೇಂದ್ರಕುಮಾರ್, | ಸದಸ್ಯರು |
| 6. | ಡಾ: ಎಸ್. ಹರೀಶ್, | ಸದಸ್ಯರು |
| 7. | ಡಾ: ಅಶಾ ಗಣೇಶ್, | ಸದಸ್ಯರು |
| 8. | ಪ್ರೊ: ಎನ್. ಚಂದ್ರಪ್ಪ,<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 9. | ಪ್ರೊ: ಎಂ.ರಾಮಚಂದ್ರಗೌಡ<br>ಕುಲಸಚಿವರು, | ಸದಸ್ಯ<br>ಕಾರ್ಯದರ್ಶಿಗಳು |

ಕುಲಸಚಿವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಸದಸ್ಯರಿಗೆ ಸ್ವಾಗತವನ್ನು ಕೋರಿ ಈ ಸಿಂಡಿಕೇಟ್ ಸಭೆಯನ್ನು ಪ್ರಮುಖವಾಗಿ 2019–20 ನೇ ಸಾಲಿನ ಆಯವ್ಯಯವನ್ನು ಚರ್ಚಿಸಿ ಅನುಮೋದನೆ ಪಡೆಯಲು ಹಾಗೂ ಇತರ ವಿಷಯಗಳನ್ನು ಪರಿಗಣಿಸಲು ಕರೆದಿರುವುದಾಗಿ ತಿಳಿಸಿದರು.

ಅದರಂತೆ, ಕಾರ್ಯಸೂಚಿಯನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

**ವಿಷಯ ಸಂಖ್ಯೆ– 1:** ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಮೊದಲನೇ ಹಣಕಾಸು ಸಮಿತಿ ಸಭೆ ಒಪ್ಪಿಗೆ ನೀಡಿರುವ 2019-2020 ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಅನುಮೋದಿಸುವ ಕುರಿತು

2019–202 ನೇ ಸಾಲಿನ ಆಯವ್ಯಯ ಅಂದಾಜು ಪತ್ರ ಕುರಿತು ಕುಲಸಚಿವರು ಪ್ರಾಸ್ತಾವಿಕವಾಗಿ ಮಾತನಾಡಿ, ಇಂದು ಮಂಡಿಸುತ್ತಿರುವ ಆಯವ್ಯಯ ವಿಶ್ವವಿದ್ಯಾಲಯದ ಪ್ರಥಮ ಆಯವ್ಯಯ ಅಂದಾಜು ಪತ್ರವಾಗಿ ಐತಿಹಾಸಿಕ ಮಹತ್ವ ಪಡೆಯಲಿದೆ ಎಂದು ತಿಳಿಸಿದರು. ಇಂದಿನ ಸಿಂಡಿಕೇಟ್ ಸದಸ್ಯರು ಈ ಆಯವ್ಯಯ ಪತ್ರವನ್ನು ಸಾಕ್ಷೀಕರಿಸಲಿದ್ದಾರೆ ಎಂದು ತಿಳಿಸಿ, ಆಯವ್ಯಯ ಕುರಿತು ವಿವರಿಸುವಂತೆ ಕುಲಪತಿಗಳನ್ನು ಕೋರಿದರು. ಕುಲಪತಿಗಳು ಆಯವ್ಯಯದ ಅಂದಾಜು ಪತ್ರದ ರೂಪುರೇಷಗಳನ್ನು ಸವಿಸ್ತಾರವಾಗಿ ಸಭೆಗೆ ವಿವರಿಸಿದರು.

ಸದಸ್ಯರು ಚರ್ಚೆಯಲ್ಲಿ ಪಾಲ್ಗೊಂಡು, ಪ್ರಮುಖವಾಗಿ ಕಟ್ಟಡಗಳ ದುರಸ್ತಿ ಹಾಗೂ ವಿಶ್ವವಿದ್ಯಾಲಯದ 'ಮಾಸ್ಟರ್ ಪ್ಲಾನ್"ಕುರಿತು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ವಿಶ್ವವಿದ್ಯಾಲಯ ಹಲವಾರು ಪ್ರಮುಖವಾದ ಕಾಮಗಾರಿಗಳನ್ನು ಕೈಗೆತ್ತಿಕೋಳ್ಳಬೇಕಾಗಿದ್ದು, ಈ ಕಾಮಗಾರಿಗಳ ಉಸ್ತುವಾರಿಗಾಗಿ ಲೋಕೋಪಯೋಗಿ ಇಲಾಖೆಯ ಒಬ್ಬರು ಕಾರ್ಯನಿರ್ವಾಹಕ ಅಭಿಯಂತರರು ಹಾಗೂ ಒಬ್ಬ ಸಹಾಯಕ ಅಭಿಯಂತರರ ಎರವಲು ಸೇವೆ ಪಡೆಯಬೇಕೆಂದು ತಿಳಿಸಿದರು. ಈಗಿರುವ ನಿವೃತ್ತ ಸಹಾಯಕ ಅಭಿಯಂತರರು ಎಂ.ಬಿ ಪುಸ್ತಕ ಬರೆಯುವದು, ಬಿಲ್ಲುಗಳನ್ನು ಸಿದ್ಧಪಡಿಸುವದು ಇತ್ಯಾದಿ ಕೆಲಸಗಳನ್ನು ನಿರ್ವಹಿಸುವದು ಸೂಕ್ತವಲ್ಲವೆಂದು ಅಭಿಪ್ರಾಯ ಪಟ್ಟರು. ಹಾಗೆಯೇ ಹಣಕಾಸು ವಿಭಾಗದಲ್ಲಿ ಸಹ ರಾಜ್ಯ ಲೆಕ್ಕ ಪತ್ರ ಇಲಾಖೆಯಿಂದ ಹಣಕಾಸು ಅಧಿಕಾರಿ ಹುದ್ದೆಗೆ ಒಬ್ಬ ಅಧಿಕಾರಿಯನ್ನು ಮತ್ತು ಸಹಾಯಕ ಹಣಕಾಸು ಅಧಿಕಾರಿ – ಅಧೀಕ್ಷಕರ ಹುದ್ದೆಗಳಿಗೆ ಅನುಭವಿ ಸಿಬ್ಬಂದಿಯನ್ನು ನಿಯೋಜಿಸಲು ಸರ್ಕಾರಕ್ಕೆ ಕೋರ ಬೇಕೆಂದು ತಿಳಿಸಿದರು.

ಸಂಶೋಧನಾ ವ್ಯಾಸಂಗಕ್ಕೆ ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನೀಡುತ್ತಿರುವ ಮಾದರಿಯಲ್ಲಿ ವಿದ್ಯಾರ್ಥಿ ವೇತನವನ್ನು ನೀಡಲು ಆಯವ್ಯಯದಲ್ಲಿ ಅವಕಾಶ ಕಲ್ಪಿಸಬೇಕೆಂದು ಸದಸ್ಯರು ಸಲಹೆ ನೀಡಿದರು.

**ಸಿಂಡಿಕೇಟ್ ನಿರ್ಣಯ:**

ಸುದೀರ್ಘ ಚರ್ಚೆಯ ನಂತರ ಕೆಳಕಂಡ ಸೂಚನೆಗಳೊಂದಿಗೆ 2019–2020 ನೇ ಸಾಲಿನ ಆಯವ್ಯಯ ಅಂದಾಜು ಪತ್ರಕ್ಕೆ ಸರ್ವಾನುಮತದ ಒಪ್ಪಿಗೆ ನೀಡಲಾಯಿತು.

1. ಪರಿಶಿಷ್ಟ ಜಾತಿ / ಪಂಗಡಗಳ ಸಂಶೋದನಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲು ರೂ.45 ಲಕ್ಷಗಳ ಮೊತ್ತದ ಅವಕಾಶ ಕಲ್ಪಿಸಬೇಕು. ಈ ಕುರಿತು ರಾಜ್ಯ ಸಕಾರದ ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಯೋಜನೆ ಅಡಿಯಲ್ಲಿ ದೊರೆಯುವ ಅನುದಾನವನ್ನು ಪಡೆಯಲು ಕ್ರಮ ಕೈಕೊಳ್ಳಬೇಕು.
2. ಸದಸ್ಯರಾದ ಡಾ.ಎನ್. ನರಸಿಂಹಮೂರ್ತಿ ಅವರು ಈ ವಿದ್ಯಾರ್ಥಿ ವೇತನ ಕುರಿತು ಇರುವ ಆದೇಶ, ಮಾರ್ಗದರ್ಶಿ ನಿಯಮಗಳನ್ನು ಒಂದು ಟಿಪ್ಪಣಿಯೊಂದಿಗೆ ಹಣಕಾಸು ಅಧಿಕಾರಿಗಳಿಗೆ ಸಲ್ಲಿಸಲು ತಿಳಿಸಲಾಯಿತು.
3. ಕ್ರಮ ಸಂಖ್ಯೆ 26 ರಲ್ಲಿ ಇರುವ ಕರ್ನಾಟಕ ಕನ್ನಡ ಸಂಘ ಶತಮಾನೋತ್ಸವ ಕುರಿತು ಇರುವ ಆಯವ್ಯಯವನ್ನು ಕ್ರ.ಸಂ. 33 ರಲ್ಲಿ ಸೇರಿಸಬೇಕೆಂದು ಸೂಚಿಸಲಾಯಿತು.

**ವಿಷಯ ಸಂಖ್ಯೆ–2:** Proceedings of the Works Committee meeting held on 14th & 20th May 2019

ತಾಂತ್ರಿಕ ಸಮಿತಿ ಹಾಗೂ ಕಾಮಗಾರಿ ಸಮಿತಿಗಳ ರಚನೆ, ಜರುಗಿದ ಸಭೆಗಳು, ತಾಂತ್ರಿಕ ಸಮಿತಿ ಸದಸ್ಯರ ವಿವರಗಳನ್ನು ಹಾಗೂ ಈ ಸಭೆಗಳು ಮಾಡಿರುವ ಶಿಫಾರಸ್ಸುಗಳ ಕುರಿತು ಕುಲಪತಿಗಳು ಸಭೆಗೆ ವಿವರಿಸದರು.

ಈ ವಿಶ್ವವಿದ್ಯಾಲಯದಲ್ಲಿರುವ ಕಟ್ಟಡಗಳು ಅತ್ಯಂತ ಹಳೆಯ ಕಟ್ಟಡಗಳಾಗಿದ್ದು, ಕಳೆದ ಸುಮಾರು ವರ್ಷಗಳಿದ ನಿರ್ವಹಣೆ ಇಲ್ಲದೆ ಶಿಥಿಲಾವಸ್ಥೆಯಲ್ಲಿ ಇರುವುದನ್ನು ಸಭೆಯ ಗಮನಕ್ಕೆ ತಂದರು. ಈ ಕಟ್ಟಡಗಳ ರಿಪೇರಿ ಕೆಲಸವನ್ನು ಅನುಭವ ಹೊಂದಿರುವ ಹಾಗೂ ನುರಿತ ಸಂಸ್ಥೆಗಳಿಂದ ಮಾಡಿಸಬೇಕಾಗಿದೆ. ಕಟ್ಟಡಗಳ ಐತಿಹಾಸಿಕ ಮಹತ್ವ ಹಾಗೂ ವಾಸ್ತು ವಿನ್ಯಸವನ್ನು ಹಾಗೆಯೇ ಉಳಿಸಿಕೊಂಡು ರಿಪೇರಿ ಕಾಮಗಾರಿ ಕೈಕೊಳ್ಳಬೇಕಾಗಿದೆ ಎಂದು ತಿಳಿಸಿದರು.

ವಿಶ್ವವಿದ್ಯಾಲಯದ ಆವರಣದ "ಮಾಸ್ಟರ್ ಪ್ಲಾನ್" ಸಿದ್ದಪಡಿಸಲು ಇ.ಪ್ರೊಕ್ಯೂರಮೆಂಟ್ ಮುಖಾಂತರ ಪ್ರಸ್ತಾವನೆಗಳನ್ನು ಪಡೆದು ವಿದ್ಯಾರ್ಥಿ ಸ್ನೇಹಿ, ವ್ಯಾಸಂಗಕ್ಕೆ ಪೂರಕವಾದ ವಾತಾವರಣ ನಿರ್ಮಿಸುವ ವಾಸ್ತು ವಿನ್ಯಸಕಾರರನ್ನು ಗುರುತಿಸಿ – ಮಾದರಿ ಆವರಣ ನಿರ್ಮಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

ಸೋಲಾರ ವಿದ್ಯುತ್ ಉತ್ಪಾದನೆಗಾಗಿ ಕಟ್ಟಗಳ ಮೇಲ್ಛಾವಣಿಗಳನ್ನು ಬಳಿಸಿಕೊಳ್ಳಲಾಗುವುದು ಎಂದು ತಿಳಿಸಿದರು. ಈ ಕುರಿತು ಕೆಲವು ಸದಸ್ಯರು ಖಾಸಗಿ ಎಜನ್ಸಿಯವರು ಹಣ ಹೂಡಿ ಯೋಜನೆಯನ್ನು ಕಾರ್ಯರೂಪದಲ್ಲಿ ತರಲು ಮುಂದೆ ಬಂದರೆ ಪರಿಗಣಿಸಬೇಕೆಂದು ತಿಳಿಸಿದರು. ಈ ಕುರಿತು ಸಾಧಕ – ಬಾಧಕಗಳನ್ನು ಪರಿಗಣಿಸಿ ಕ್ರಮ ಕೈಕೊಳ್ಳಲಾಗುವುದೆಂದು ತಿಳಿಸಿದರು.

ವಿಶ್ವವಿದ್ಯಾಲಯಕ್ಕೆ ಅಗತ್ಯವಾದ 4 ಮಹಾದ್ವಾರಗಳನ್ನು ಆಕರ್ಷಕವಾದ ಶೈಲಿಯಲ್ಲಿ ನಿರ್ಮಾಣ ಮಾಡಲು ಯೋಜಿಸಲಾಗಿದೆ ಎಂದು ತಿಳಿಸಿ ಈ ಎಲ್ಲಾ ಅಂಶಗಳನ್ನು ಒಳಗೊಂಡ ಕಾಮಗಾರಿ ಸಮಿತಿಯ ಶಿಫಾರಸ್ಸುಗಳನ್ನು ಪರಿಗಣಿಸಿ ಅನುಮೋದನೆ ನೀಡಲು ಪ್ರಾಸ್ತಾಪಿಸಿದರು.

ಸದಸ್ಯರಾದ ಡಾ:ಎನ್. ನರಸಿಂಹಮೂರ್ತಿಯವರು ಹೆಸರಘಟ್ಟದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ 14 ಎಕರೆ ಜಮೀನು ಹಾಗೂ ವಿಶಾಲವಾದ ಕಟ್ಟಡದಲ್ಲಿ ಸದ್ಯಕ್ಕೆ ಸಕಾರದ ಸಿನಿಮಾ ಮತ್ತು ದೂರದರ್ಶನ ಸಂಸ್ಥೆ ಕಾರ್ಯನಿರ್ವಹಿಸುತ್ತಿಲ್ಲ. ಸರ್ಕಾರಕ್ಕೆ ವಿನಂತಿಸಿ ಸದರಿ ಜಮೀನು ಹಾಗು ಕಟ್ಟಡವನ್ನು ವಿಶ್ವವಿದ್ಯಾಲಯ ಪಡೆಯಬೇಕೆಂದು ತಿಳಿಸಿದರು. ಸದರಿಯವರು ಅಗತ್ಯವಾದ ವಿವರಗಳನ್ನು ಪಡೆದು ಕುಲಪತಿಗಳಿಗೆ ಸಲ್ಲಿಸಬೇಕೆಂದು ಸಭೆ ತೀರ್ಮಾನಿಸಿತು.

ಸದಸ್ಯರು ವಿಶ್ವವಿದ್ಯಾಲಯದ ಕಾರ್ಯಯೋಜನೆಗೆ ಮೆಚ್ಚಿಗೆ ಸೂಚಿಸಿದರು. ಹಾಗೆಯೆ ಸದಸ್ಯರು ಕೋರಿದ ಹಲವಾರು ವಿಷಯಗಳ ಬಗ್ಗೆ ವಿವರಗಳನ್ನು ನೀಡಲಾಯಿತು.

**ಸಿಂಡಿಕೇಟ್ ನಿರ್ಣಯ:**

ಸುದೀರ್ಘ ಚರ್ಚೆಯ ನಂತರ ಕಾಮಗಾರಿ ಸಮಿತಿಯು ದಿನಾಂಕ 14 ರ ಮತ್ತು 20ನೇ ಮೇ 2019 ರಲ್ಲಿ ಜರುಗಿದ ಸಭೆಯ ನಡಾವಳಿಗೆ ಕೆಳಕಂಡ ಸೂಚನೆಗಳನ್ನು ನೀಡಿ,' ಅನುಮೋದನೆ ನೀಡಲಾಯಿತು:

ಸೆಂಟ್ರಲ್ ಕಾಲೇಜು ಹಾಗೂ ಪ್ರಸನ್ನಕುಮಾರ್ ಬ್ಲಾಕ್ ಆವರಣಗಳು ಸೇರಿ ಇಡೀ ಕ್ಯಾಂಪಸ್ ಅಭಿವೃದ್ಧಿ ಕುರಿತು ಸಿದ್ದಪಡಿಸಬೇಕಾದ "ಮಾಸ್ಟ್ ಪ್ಲಾನ್" ಇ–ಪ್ರಕ್ಯೂರಮೆಂಟ್ ಮುಖಾಂತರ **Expression of Interest (EOI)** ಪಡೆದು ವಾಸ್ತು ವಿನ್ಯಸಕಾರರನ್ನು ಗುರುತಿಸಿ – ಮಾದರಿ ಆವರಣ ನಿರ್ಮಿಸಲು ಕ್ರಮ ಕೈಕೊಳ್ಳಬೇಕೆಂದು ತೀರ್ಮಾನಿಸಲಾಯಿತು.

ದಿನಾಂಕ 20ನೇ ಮೇ 2019ರ ನಡಾವಳಿಯಲ್ಲಿ ನಮೋದಿಸಿದಂತೆ ವಿಷಯ ಸಂಖ್ಯೆ–2(1), 2(2) ಹಾಗೂ 2(3) ಗಳನ್ನು ಇ–ಪ್ರಕ್ಯೂರಮೆಂಟ್ ಮುಖಾಂತರ ನಿರ್ವಹಿಸಲು ಹಾಗೂ ವಿಷಯ ಸಂಖ್ಯೆ–2(4), 2(5), 2(6) 2(7) 2(8) ಮತ್ತು 2(9) ಗಳನ್ನು ಬೆಂಗಳೂರು ನಿರ್ಮಿತಿ ಕೇಂದ್ರ (ನಗರ) ಮುಖಾಂತರ ನಿರ್ವಹಿಸಲು ತೀರ್ಮಾನಿಸಲಾಯಿತು. ಸದಸ್ಯರಾದ ಶ್ರೀ ಹೆಚ್.ಆರ್. ಸತೀಶ್ ಅವರನ್ನು ಕಾಮಗಾರಿ ಪರಿಶೀಲನಾ ಸಮಿತಿಗೆ ಸದಸ್ಯರಾಗಿ ನೆಮಿಸಲು ತೀರ್ಮಾನಿಸಲಾಯಿತು.

ಸಿಂಡಿಕೇಟ್ ಸದಸ್ಯರಾದ ಡಾ: ನರಸಿಂಹಮೂರ್ತಿ ಅವರು ಕಾಮಗಾರಿಗಳ ಅನುಮೋದನೆ ಕುರಿತು ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿದರು.

**ವಿಷಯ ಸಂಖ್ಯೆ–3:** ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ವಿವಿಧ ವಿಭಾಗ/ಕಛೇರಿಗಳಲ್ಲಿ ತಾತ್ಕಾಲಿಕವಾಗಿ ಸಂಚಿತ ಸಂಭಾವನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಸೇವೆಯನ್ನು ಮುಂದುವರೆಸುವ ಬಗ್ಗೆ

**ಸಿಂಡಿಕೇಟ್ ನಿರ್ಣಯ:**

ವಿಶ್ವವಿದ್ಯಾಲಯದ ವಿವಿಧ ವಿಭಾಗ / ಕಛೇರಿಗಳಲ್ಲಿ ತಾತ್ಕಾಲಿಕವಾಗಿ ಸಂಚಿತ ಸಂಭಾವನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ಅಧಿಕಾರಿ/ನೌಕರರ ಸೇವೆಯನ್ನು ಮುಂದುವರೆಸಲು ಘಟನೋತ್ತರವಾಗಿ ಅನುಮೋದನೆ ನೀಡಲಾಯಿತು.

70 ವರ್ಷ ವಯಸ್ಸು ಪೂರೈಸಿದ ನಿವೃತ್ತ ಅಧಿಕಾರಿಗಳ ಸೇವೆಯನ್ನು ವಿಶ್ವವಿದ್ಯಾಲಯದಲ್ಲಿ ಮುಂದುವರೆಸಬಾರದೆಂದು ಸಿಂಡಿಕೇಟ್ ಸಭೆ ತೀರ್ಮಾನಿಸಿತು.

ರಾಜ್ಯ ಲೆಕ್ಕ ಪತ್ರ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಯಿಂದ ನಿಯೋಜನೆ ಮೇಲೆ ಅಧಿಕಾರಿಗಳ ಸೇವೆಯನ್ನು ಪಡೆಯುವ ಕಾರ್ಯ ತ್ವರಿತಗೊಳಿಸಲು ಸೂಚಿಸಲಾಯಿತು.

**ವಿಷಯ ಸಂಖ್ಯೆ–4:** ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದಲ್ಲಿ ತೋಟಪಾಲಕರಾಗಿ ಸಂಚಿತ ವೇತನ ಹೊರಗುತ್ತಿಗೆ ಆಧಾರದಲ್ಲಿ ಸಂಚಿತ ಸಂಭಾವನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರ ಸೇವಾ ಮುಂದುವರಿಕೆ ಬಗ್ಗೆ

**ಸಿಂಡಿಕೇಟ್ ನಿರ್ಣಯ:**

ವಿಶ್ವವಿದ್ಯಾಲಯದಲ್ಲಿ ಸಂಚಿತ ವೇತನ ಆಧಾರದ ಮೇಲೆ ತೋಟಪಾಲಕರಾಗಿ ಕಾರ್ಯ ನಿರ್ವಹಿಸುತ್ತಿರುವವರ ಸೇವೆಯನ್ನು ಮುಂದುವರಿಸಲು ಘಟನೋತ್ತರವಾಗಿ ಅನುಮೋದನೆ ನೀಡಲಾಯಿತು. "ಹೊರಗುತ್ತಿಗೆ" ಬದಲಿಗೆ "ಸಂಚಿತ ವೇತನ" ಎಂದು ಪರಿಗಣಿಸುವಂತೆ ಸೂಚಿಸಲಾಯಿತು.

ಉದ್ಯಾನ ಪರಿಪಾಲಕರಾಗಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ನಾರಾಯಣಸ್ವಾಮಿ, ಅವರ ಸೇವೆಯನ್ನು ಮುಂದುವರೆಸುವ ಕುರಿತು ಪರಿಶೀಲಿಸಿ ಕ್ರಮ ಕೈಕೊಳ್ಳಬೇಕೇಂದು ಸಿಂಡಿಕೇಟ್ ಸಭೆ ತೀರ್ಮಾನಿಸಿತು.

ವಿಷಯ ಸಂಖ್ಯೆ-5: Appointment of Co-ordinator of Prasaranga of BCU-reg

**ಸಿಂಡಿಕೇಟ್ ನಿರ್ಣಯ:**

ಶ್ರೀ ಡಿ.ಎನ್. ಗುರುಪ್ರಸಾದ ಇವರನ್ನು ಪ್ರಸಾರಂಗದ ಸಂಯೋಜಕರಾಗಿ ನೇಮಕವಾದ ದಿನಾಂಕದಿಂದ ಆರು ತಿಂಗಳ ಅವಧಿಗೆ ಮಾಸಿಕ ರೂ.50,000/- ಸಂಚಿತ ವೇತನ ಆಧಾರದಲ್ಲಿ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಅನುಮೋದನೆ ನೀಡಲಾಯಿತು.

ವಿಷಯ ಸಂಖ್ಯೆ-6: ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ವಿವಿಧ ವಿಭಾಗ / ಕಛೇರಿಗಳಲ್ಲಿ ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದಲ್ಲಿ ಸಂಚಿತ ಸಂಭಾವನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರ ಸೇವೆಯನ್ನು ಮುಂದುವರೆಸುವ ಬಗ್ಗೆ

**ಸಿಂಡಿಕೇಟ್ ನಿರ್ಣಯ:**

ವಿಶ್ವವಿದ್ಯಾಲಯದಲ್ಲಿ ಸಂಚಿತ ವೇತನ ಆಧಾರದ ಮೇಲೆ ವಿವಿಧ ವಿಭಾಗ/ ಕಛೇರಿಗಳಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವವರ ಸೇವೆಯನ್ನು 01.04.2019 ರಿಂದ 30.09.2019 ರ ವರೆಗೆ ಮುಂದುವರೆಸಲು ಘಟನೋತ್ತರವಾಗಿ ಅನುಮೋದನೆ ನೀಡಲಾಯಿತು. ಇವರುಗಳ ಕಾರ್ಯನಿರ್ವಹಣೆಯ ಪ್ರಗತಿ ಕುರಿತು ಪರಿಶೀಲಿಸಿ ತೃಪ್ತಿಕರವಾಗಿ ಕಾರ್ಯನಿರ್ವಹಿಸದೇ ಇರುವವರ ಸೇವೆಯನ್ನು ಮುಂದುವರೆಸಬಾರದೆಂದು ಸಿಂಡಿಕೇಟ್ ಸಭೆ ತೀರ್ಮಾನಿಸಿತು. ಸದರಿಯವರ ಸೇವಯನ್ನು "ಹೊರಗುತ್ತಿಗೆ" ಬದಲಿಗೆ "ಸಂಚಿತ ವೇತನ" ಎಂದು ಪರಿಗಣಿಸುವಂತೆ ಸೂಚಿಸಲಾಯಿತು.

ವಿಶ್ವವಿದ್ಯಾಲಯದ ವಿವಿಧ ವಿಭಾಗ / ಕಛೇರಿಗಳಲ್ಲಿ ಸಂಚಿತ ವೇತನ ಆಧಾರದಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವವರಿಗೆ ಸರ್ಕಾರ ನಿಗದಿ ಪಡಿಸಿದ ಕನಿಷ್ಠ ವೇತನವನ್ನು ನೀಡಲು ಕ್ರಮ ಕೈಕೊಳ್ಳ ಬೇಕೇಂದು ಸಿಂಡಿಕೇಟ್ ಸಭೆ ತೀರ್ಮಾನಿಸಿತು. ಇನ್ನು ಮುಂದೆ ಸಂಚಿತ ವೇತನ ಆಧಾರದಲ್ಲಿ ನೇಮಕಗಳನ್ನು ನಿಯಮಾನುಸಾರ ಮಾಡಬೇಕೆಂದು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ-7: ಸಹಾಯಕ ಗ್ರಂಥಪಾಲಕರು ಹಾಗೂ ಗ್ರಂಥಾಲಯ ಸಹಾಯಕರನ್ನು ತಾತ್ಕಾಲಿಕವಾಗಿ ಸಂಚಿತ ಸಂಭಾವನೆ ಮೇಲೆ ನೇಮಕಾತಿ ಮಾಡಿರುವದರ ಅನುಮೋದನೆಯ ಬಗ್ಗೆ

**ಸಿಂಡಿಕೇಟ್ ನಿರ್ಣಯ:**

ಸಹಾಯಕ ಗ್ರಂಥಪಾಲಕರು ಹಾಗೂ ಗ್ರಂಥಾಲಯ ಸಹಾಯಕರನ್ನು ತಾತ್ಕಾಲಿಕವಾಗಿ ಸಂಚಿತ ಸಂಭಾವನೆ ಮೇಲೆ ನೇಮಕಾತಿ ಮಾಡಿರುವುದಕ್ಕೆ ಘಟನೋತ್ತರವಾಗಿ ಅನುಮೋದನೆ ನೀಡಲಾಯಿತು.

ವಿಷಯ ಸಂಖ್ಯೆ-8: To constitute Committees in connection with Renewal of Recognition of Research Centres

**Syndicate Resolution:**

The Syndicate resolved to approve the Committees proposed in the Reference Note to be constituted to visit the Post Graduate Department of Studies of affiliated Colleges of the University for renewal of Recognition of Research Centres.

ವಿಷಯ ಸಂಖ್ಯೆ-9: To ratify the reconstitution of Board of Studies in English (PG)

**Syndicate Resolution:**

The Syndicate resolved to ratify the reconstitution of Board of Studies in English (PG).

ವಿಷಯ ಸಂಖ್ಯೆ-10: To ratify the reconstitution of Board of Studies in MBA (PG)

**Syndicate Resolution:**

The Syndicate resolved to ratify the reconstitution of Board of Studies in MBA(PG)

ವಿಷಯ ಸಂಖ್ಯೆ-11: ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಗಣಿತಶಾಸ್ತ್ರ ಹಾಗೂ ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ವಿಭಾಗಕ್ಕೆ ಸಂಯೋಜಕರ ನೇಮಕಾತಿ – ಬಗ್ಗೆ

**ಸಿಂಡಿಕೇಟ್ ನಿರ್ಣಯ:**

ಗಣಿತಶಾಸ್ತ್ರ ಹಾಗೂ ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ವಿಭಾಗಕ್ಕೆ ಸಂಯೋಜಕರ ನೇಮಕಾತಿ ಕುರಿತು ಕೈಕೊಂಡ ಕ್ರಮಕ್ಕೆ

ಘಟನೋತ್ತರವಾಗಿ ಅನುಮೋದನೆ ನೀಡಲಾಯಿತು.

ಪ್ರೊ: ಎಂ.ಎಸ್. ಮಹದೇವ ನಾಯಕ, ಅವರು ಈ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸೇವೆಯನ್ನು ಸ್ಮರಿಸಿ ಅವರು ಮಂಡ್ಯ ವಿಶ್ವವಿದ್ಯಾಲಯದ ವಿಶೇಷ ಆಧಿಕಾರಿಯಾಗಿ ನೇಮಕ ಹೊಂದಿರುವುದಕ್ಕೆ ಅಭಿನಂದನೆಗಳನ್ನು ಸಭೆ ವ್ಯಕ್ತಪಡಿಸಿತು.

**ವಿಷಯ ಸಂಖ್ಯೆ-12:** Starting of P.G. Department of Studies in Bengaluru Central University

**ಸಿಂಡಿಕೇಟ್ ನಿರ್ಣಯ:**

ಹೊಸ ಸ್ನಾತಕೋತ್ತರ ವಿಭಾಗಗಳ ಪ್ರಾರಂಭ ಕುರಿತಂತೆ ಸದಸ್ಯರು ವ್ಯಕ್ತಪಡಿಸಿದ ಸಂದೇಹಗಳಿಗೆ ಕುಲಪತಿಗಳು ವಿವರಣೆ ನೀಡಿದರು. ಬಳಿಕ ಪ್ರಸ್ತಾವನೆಯಲ್ಲಿ ನಮೋದಿಸಿದಂತೆ ಕೆಳಕಂಡ 4 ಹೊಸ ವ್ಯಾಸಂಗಗಳನ್ನು ಪ್ರಾರಂಭಿಸಲು ಒಪ್ಪಿಗೆ ನೀಡಲಾಯಿತು.

1) M.A – Urban Studies and Planning
2) M.Sc – Physics
3) M.Sc – Life Sciences
4) M.Sc – Environment and Climate Change

**ವಿಷಯ ಸಂಖ್ಯೆ-13:** ಡಿಸೆಂಬರ್ 2018 ರಲ್ಲಿ ನಡೆದ ಸ್ನಾತಕ ಪರೀಕ್ಷೆಯಲ್ಲಿ Malpractice ಮಾಡಿದ ವಿದ್ಯಾರ್ಥಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ಸಿಂಡಿಕೇಟ್ ಅನುಮೋದನೆ ಪಡೆಯುವ ಕುರಿತು

**ಸಿಂಡಿಕೇಟ್ ನಿರ್ಣಯ:**

ಡಿಸೆಂಬರ್ 2018 ರಲ್ಲಿ ನಡೆದ ಸ್ನಾತಕ ಪರೀಕ್ಷೆಯಲ್ಲಿ Malpractice ಮಾಡಿದ ವಿದ್ಯಾರ್ಥಿಗಳ ಮೇಲೆ ತೆಗೆದುಕೊಂಡ ಕ್ರಮಕ್ಕೆ ಘಟನೋತ್ತರವಾಗಿ ಅನುಮೋದನೆ ನೀಡಲು ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ-14:** Regulations Governing the Entrance Test for Post Graduate Degree admissions in the Faculties of Arts, Science, Commerce and Education at Bengaluru Central University

**ಸಿಂಡಿಕೇಟ್ ನಿರ್ಣಯ:**

ಕರಡು ವಿನಿಯಮಗಳಿಗೆ ತಾತ್ವಿಕವಾದ ಅನುಮೋದನೆ ನೀಡಿ ಸದಸ್ಯರಾದ ಡಾ: ಎನ್. ನರಸಿಂಹಮೂರ್ತಿ, ಅವರು ಸ್ನಾತಕೋತ್ತರ ಪ್ರವೇಶ ಪರೀಕ್ಷೆಯ ವಿನಿಯಮಗಳನ್ನು ಪುನರ್‌ರಚನೆ ಮಾಡಿ ವಿದ್ಯಾವಿಷಯಕ ಪರಿಷತ್ತಿನ ಪರಿಗಣನೆಗಾಗಿ ಸಲ್ಲಿಸಬೇಕೆಂದು ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ–15:** To establish "Centre for Advanced Studies, Professional Education & Research" (CASPER) and to introduce PG Diploma Courses in the Centre.

ಅಡಹಾಕ್ ಅಧ್ಯಯನ ಮಂಡಳಿ ಅಧ್ಯಕ್ಷರಾದ ಪ್ರೊ. ದೇವರಾಜು ಅವರು ಕುಲಪತಿಗಳ ಅಹ್ವಾನದ ಮೇರೆಗೆ ಸಭೆಗೆ ಆಗಮಿಸಿ ಪ್ರಸ್ತಾವನೆಯಲ್ಲಿ ನಮೂದಿಸಿದ ಸ್ನಾತಕೋತ್ತರ ಡಿಪ್ಲೋಮ ವ್ಯಾಸಂಗಳ ಕುರಿತು, "Centre for Advanced Studies, Professional Education & Research" (CASPER) ಹಾಗೂ ಒಡಂಬಡಿಕೆ ಬಗ್ಗೆ ಸಂಬಂಧಿಸಿದಂತೆ ವಿವರಣೆ ನೀಡಿದರು.

**ಸಿಂಡಿಕೇಟ್ ನಿರ್ಣಯ:**

ಸಿಂಡಿಕೇಟ ಸಭೆ ವಿಶ್ವವಿದ್ಯಾಲಯದ ವಿನೂತನವಾದ ಕಾರ್ಯಕ್ರಮಕ್ಕೆ ಮೆಚ್ಚುಗೆ ಸೂಚಿಸಿ CASPER ಪರಿನಿಯಮ ಹಾಗೂ ಒಡಂಬಡಿಕೆ ಪತ್ರಕ್ಕೆ ಅನುಮೋದನೆ ನೀಡಿತು

**ವಿಷಯ ಸಂಖ್ಯೆ–16:** ಸೃಷ್ಟಿ ಇನ್ಸಿಟಿಟ್ಯೂಟ್ ಆಫ್ ಆರ್ಟ್ಸ್, ಡಿಸೈನ್ ಅಂಡ್ ಟೆಕ್ನಾಲಜಿ ಸಂಸ್ಥೆಯ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ತುಂಬಲು ಮತ್ತು ಅಂಕಪಟ್ಟಿ ಮುದ್ರಿಸಿ ನೀಡಲು ಘಟನೋತ್ತರ ಮಂಜೂರಾತಿ ನೀಡುವ ಬಗ್ಗೆ.

**ಸಿಂಡಿಕೇಟ್ ನಿರ್ಣಯ:**

ಸದರಿ ಸಂಸ್ಥೆ ವಿಶ್ವವಿದ್ಯಾಲಯದ ಅನುಮತಿ ಇಲ್ಲದೇ ಪರೀಕ್ಷಾ ಶುಲ್ಕದ ಅಧಿಸೂಚನೆ ಹೊರಡಿಸದೆ. ಪರೀಕ್ಷಾ ಶುಲ್ಕ ಪಡೆದು ಪರೀಕ್ಷೆಗಳನ್ನು ನಡೆಸಿ ಫಲಿತಾಂಶಗಳನ್ನು ಪ್ರಕಟಿಸಿರುವುದನ್ನು ಗಂಭೀರವಾಗಿ ಪರಿಗಣಿಸಿ ಎಚ್ಚರಿಕೆ ನೀಡಲು ಸಭೆ ನಿರ್ಣಯಿಸಿತು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಲೋಪದೋಷಗಳನ್ನು ಮನ್ನಿಸಿ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಸ್ವೀಕರಿಸಲು ಘಟನೋತ್ತರ ಅನುಮೋದನೆ ನೀಡಲಾಯಿತು. ಸದರಿ ಸಂಸ್ಥೆಗೆ ಮನ್ನಣೆ ನೀಡುವ ಕುರಿತು ಅಗತ್ಯ ಪರಿನಿಯಮಗಳನ್ನು ರಚಿಸಿ ಸಂಸ್ಥೆಯೊಂದಿಗೆ ಹೊಸ ಒಡಂಬಡಿಕೆ (MoU) ಮಾಡಿಕೊಳ್ಳಲು ಅಗತ್ಯ ಕ್ರಮ ಕೈಕೊಳ್ಳಲು ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ-17:** ಕೇಂದ್ರೀಯ ಖರೀದಿ ಸಮಿತಿ ರಚಿಸುವ ಕುರಿತು

**ಸಿಂಡಿಕೇಟ್ ನಿರ್ಣಯ:**

ಕೆಳಕಂಡ ಸದಸ್ಯರನ್ನು ಒಳಗೊಂಡ ಕೇಂದ್ರೀಯ ಖರೀದಿ ಸಮಿತಿ ರಚಿಸಲು ತೀರ್ಮಾನಿಸಲಾಯಿತು:

1. ಕುಲಪತಿಗಳು .. ಅಧ್ಯಕ್ಷರು
2. ಕುಲಸಚಿವರು .. ಸದಸ್ಯರು
3. ಕುಲಸಚಿವರು(ಮೌಲ್ಯಮಾಪನ) .. ಸದಸ್ಯರು
4. ಡಾ: ಅರವಿಂದ್ ಹೆಚ್.ಟಿ .. ಸದಸ್ಯರು
   ಸಿಂಡಿಕೇಟ್ ಸದಸ್ಯರು
5. ಡಾ:ಎನ್. ನರಸಿಂಹಮೂರ್ತಿ .. ಸದಸ್ಯರು
   ಡೀನರು, ಕಲಾ ನಿಕಾಯ
6. ಡಾ. ಆರ್. ಪಾರ್ವತಿ .. ಸದಸ್ಯರು
   ಸದಸ್ಯರು, ವಿದ್ಯಾವಿಷಯಕ ಪರಿಷತ್
7. ಹಣಕಾಸು ಅಧಿಕಾರಿಗಳು .. ಸದಸ್ಯ ಕಾರ್ಯದರ್ಶಿ

ಆಯಾ ವಿಭಾಗಗಳಿಗೆ ಸಂಬಂದಿಸಿದ ವಿಷಯಗಳನ್ನು ಪರಿಗಣಿಸುವಾಗ ವಿಭಾಗದ ಮುಖ್ಯಸ್ಥರು / Principal Investigator ಹಾಜರಿದ್ದು ವಿವರಗಳನ್ನು ಒದಗಿಸಬೇಕು.

**ವಿಷಯ ಸಂಖ್ಯೆ-18:** ಪರೀಕ್ಷಾ ಸಂಭಾವನೆ ಪರಿಷ್ಕರಿಸಲು ಸಮಿತಿ ರಚಿಸುವ ಕುರಿತು

**ಸಿಂಡಿಕೇಟ್ ನಿರ್ಣಯ:**

ಕೆಳಕಂಡ ಸದಸ್ಯರನ್ನು ಒಳಗೊಂಡ ಪರೀಕ್ಷಾ ಸಂಭಾವನೆ ಪರಿಷ್ಕರಣ ಸಮಿತಿ ರಚಿಸಲು ತೀರ್ಮಾನಿಸಲಾಯಿತು: ಸರ್ಕಾರದ ಮಟ್ಟದಲ್ಲಿ ಪರೀಕ್ಷಾ ಸಂಭಾವನೆ ಕುರಿತು ರಚಿಸಿದ ಸಮಿತಿಯು ಶಿಫಾರಸ್ಸು ಮಾಡಿದ ದರಗಳನ್ನು ಉಳಿಸಿಕೊಂಡು ಬೇರೆ ದರಗಳನ್ನು ಶಿಫಾರಸ್ಸು ಮಾಡಬೇಕೆಂದು ಸೂಚಿಸಲಾಯಿತು:

1. ಕುಲಸಚಿವರು (ಮೌಲ್ಯಮಾಪನ) .. ಅಧ್ಯಕ್ಷರು ಮತ್ತು ಸಂಚಾಲಕರು
2. ವಿತ್ತಾಧಿಕಾರಿಗಳು, .. ಸದಸ್ಯರು

3. ಡಾ: ಎಸ್. ಹರೀಶ್ .. ಸದಸ್ಯರು
ಸಿಂಡಿಕೇಟ್ ಸದಸ್ಯರು

4. ಡಾ: ಅರವಿಂದ್ ಹೆಚ್.ಟಿ .. ಸದಸ್ಯರು
ಸಿಂಡಿಕೇಟ್ ಸದಸ್ಯರು

5. ಡಾ: ಇ.ಬಿ. ರಾಜೇಶ್ .. ಸದಸ್ಯರು
ಸದಸ್ಯರು, ವಿದ್ಯಾವಿಷಯಕ ಪರಿಷತ್

6. ಡಾ: ಆರ್. ಪಾರ್ವತಿ .. ಸದಸ್ಯರು
ಸದಸ್ಯರು, ವಿದ್ಯಾವಿಷಯಕ ಪರಿಷತ್

7. ಡಾ: ಎಂ. ಪಾಂಡುರಂಗಪ್ಪ .. ಸದಸ್ಯರು
ಡೀನರು, ವಿಜ್ಞಾನ ನಿಕಾಯ

8. ಡಾ: ಎಂ. ಜಯಪ್ಪ, .. ಸದಸ್ಯರು
ಪ್ರಾಂಶುಪಾಲರು,
ಆರ್.ಬಿ.ಎ.ಎನ್.ಎಂ.ಎಸ್ ಕಾಲೇಜು

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ
ಕುಲಸಚಿವರು

ಸಹಿ
ಕುಲಪತಿಗಳು

M. [signature] 3/7/19
ಕುಲಸಚಿವರು